# ಶರ್ಮಿಳಾ

## ಮರಳಿಗೆ ಮರುಳು



ಸಿನಿಮಾವೊಂದರ ಶೂಟಿಂಗ್ ಸಲುವಾಗಿ ದುಬೈಗೆ ಭೇಟಿ ಕೊಟ್ಟಿರುವ ನಟಿ ಶರ್ಮಿಳಾ ಮಾಂಡ್ರೆ, ಬಿಡುವಿನ ವೇಳೆ ಮರುಭೂಮಿಯಲ್ಲಿ ಹೊಸ ಹೊಸ ಅನುಭವಗಳೊಂದಿಗೆ ಖುಷಿಪಡುತ್ತಿದ್ದಾರೆ. ಮರಳ ರಾಶಿಯ ನಡುವೆ ಸುಂದರ ಫೋಟೊಶೂಟ್ ಕೂಡ ಮಾಡಿಸಿದ್ದಾರೆ.

ಮರಳ ಸಾಗರದಲ್ಲಿ ಕಪ್ಪುಡುಗೆ ತೊಟ್ಟು ಮಿಂಚುತ್ತಿರುವ ಶರ್ಮಿಳಾ, **‘First of many shoots in desert’** ಎಂದು ಫೋಟೊಶೂಟ್ ಕುರಿತ ವಿಡಿಯೊ ತುಣುಕೊಂದನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

ರಿಲ್ಯಾಕ್ಸಿಂಗ್ ಮೂಡ್‌ನಲ್ಲಿದ್ದ ಅವರು, ಆ ಸುಂದರ ಸ್ಥಳ ನೀಡುತ್ತಿರುವ ಎಲ್ಲಾ ಅನುಭವಗಳಲ್ಲೂ ಒಂದಾಗಿ ಮಿಂದೇಳುವುದಾಗಿ ಹೇಳಿಕೊಂಡಿದ್ದಾರೆ. ಇದೇ ಸಂದರ್ಭ, ಸೂರ್ಯನ ಉರಿ ಬಿಸಿಲಿನ ನಡುವೆ ಶೂಟಿಂಗ್ ಮಾಡುವ ಸವಾಲುಗಳ ಕುರಿತು ಮಾತನಾಡಿದ್ದಾರೆ.

‘ಮರುಭೂಮಿಯ ನೆಲ– ದುಬೈನಲ್ಲಿ ಕ್ಷಣಕ್ಷಣಕ್ಕೂ ತಾಪಮಾನ ಏರಿಕೆಯಾಗುತ್ತದೆ. ಎಲ್ಲೆಲ್ಲೂ ಉರಿ ಬಿಸಿಲು... ಈ ರಣಬಿಸಿಲಿನಿಂದ ತಪ್ಪಿಸಿಕೊಳ್ಳಲು ಸೂರ್ಯನ ಬಿಸಿಲು ಕಡಿಮೆಯಿರುವ ಎಳೆಬಿಸಿಲು, ಇಳಿಸಂಜೆ ‘ಗೋಲ್ಡನ್ ಅವರ್’ನಲ್ಲಿ ಶೂಟಿಂಗ್ ಮಾಡುತ್ತಿದ್ದೆವು. ಕಣ್ಣು ಎಷ್ಟು ದೂರ ಹಾಯಲು ಸಾಧ್ಯವೋ ಅಷ್ಟು ದೂರವೂ ಬರೀ ಮರಳು... ಎಲ್ಲವೂ ಮರಳುಮಯ.



ಆ ಮರಳಿನ ರಾಶಿ ಮೇಲೆ ನಡೆಯುವುದೇ ಸಾಹಸ. ಕಾಲುಗಳು ಮರಳಿನೊಳಗೆ ಹೂತುಹೋಗುತ್ತಿದ್ದವು. ಬರಿಗಾಲಲ್ಲಿ ಮರಳಿನ ಮೇಲೆ ನಡೆಯುವುದು ಒಂಥರಾ ಖುಷಿ. ಶೂಟಿಂಗ್ ಮುಗಿಸಿ ಕಾರಿಗೆ ವಾಪಸ್ ಆದಾಗ, ಕಾರಿನಲ್ಲೂ ಮರಳು ತುಂಬಿಕೊಂಡುಬಿಟ್ಟಿರುತ್ತಿತ್ತು. ಒಟ್ಟಾರೆ ಆ ಅನುಭವವೇ ರೋಚಕ’ ಎಂದು ಸಂತಸದಿಂದ ತಮ್ಮ ಅನುಭವಗಳನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದಾರೆ.

ದುಬೈನಲ್ಲಿ ಏನೇನು ಮಾಡಬಹುದೆಂಬ ಪಟ್ಟಿಯನ್ನೂ ನೀಡಿದ್ದಾರೆ ಅವರು. ಡೆಸರ್ಟ್ ಸಫಾರಿ, ಅರೇಬಿಯನ್ ನೈಟ್ಸ್ ಬೆಲ್ಲಿ ಡಾನ್ಸ್ ಪ್ರದರ್ಶನ, ಸ್ಥಳೀಯ ಲೆಬನೀಸ್, ಅರೇಬಿಕ್ ಖಾದ್ಯಗಳ ರುಚಿ ನೋಡಲೇಬೇಕು ಎಂದಿದ್ದಾರೆ. ಜುಮೀರಾ ಬೀಚ್‌ನಲ್ಲಿ ಸುಂದರ ಅಲೆಗಳನ್ನು ನೋಡಿಕೊಂಡು ರೆಸ್ಟೊರೆಂಟ್‌ಗಳಲ್ಲಿ ತಿಂಡಿ ತಿನಿಸು ಸವಿಯುವ ಮಜವೇ ಬೇರೆ ಎಂದು ದುಬೈನ ಮತ್ತಷ್ಟು ನೆನಪುಗಳನ್ನು ಮೊಗೆದಿದ್ದಾರೆ.